ಶ್ರೀ ಎ.ಎಂ. ಹಿಂಡಸಗೇರಿ :— ಆಗಲೇ ನಾನು ಹೇಳಿದಂತೆ ಜಮೀನನ್ನು ನಾವು ಖರೀದಿಸಿದ್ದೇವೆ. ಒಳ್ಳೆಯ ಜಮೀನು. ಬೇಲೂರು ಕೈಗಾರಿಕಾ ಎಸ್ಟೇಟಿನ ಮಧ್ಯದಲ್ಲೇ ಇದೆ. ಅವರ ಕಳಕಳಿ ನನಗೆ ಗುರುತಿದೆ. ಹಿಂದೆ ನನ್ನ ಭೇಟಿಯಾದಾಗಲೂ ಹೇಳಿದ್ದಾರೆ.

ಅಧ್ಯಕ್ಷರು :— ಪ್ರಶ್ನೋತ್ತರ ಮುಗಿಯಿತು.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು :— ಈಗ 17ನೇ ಪಟ್ಟಿಯ ತಡೆಹಿಡಿಯಲಾದ ಪ್ರಶ್ನೆಗಳು.

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಸಚಿವರು) :— ಅಧ್ಯಕ್ಷರೇ, 17ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 121 ಪ್ರಶ್ನೆಗಳ ಪೈಕಿ 103 ಉತ್ತರಗಳನ್ನು ಸದನದಲ್ಲಿ ಮಂಡಿಸಿದ್ದೇನೆ.

ಸುಳ್ಯ ವಿಧಾನಸಭಾ ಕ್ಷೇತ್ರವ್ಯಾಪ್ತಿಗೆ ಮರು ಡಾಂಬರೀಕರಣ.

2181(3235)ಶ್ರೀ ಎಸ್. ಅಂಗಾರ (ಸುಳ್ಯ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಸುಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಸಂಬಂಧಪಟ್ಟ ಉಪ್ಪಿನಂಗಡಿ ಕಡಬ ಸುಬ್ರಹ್ಮಣ್ಯ ರಸ್ತೆಯ ಮಧ್ಯ ಹೊಂಡ ಗುಂಡಿಗಳು ಬಿದ್ದಿರುವುದಲ್ಲದೆ ಎರಡು ಪಕ್ಕದಲ್ಲಿರುವ ಗುಂಡಿಗಳು ಬಿದ್ದಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದರ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು;

2. ಈ ರಸ್ತೆಗೆ ಎಷ್ಟು ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿದೆ; ಮರುಡಾಂಬರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದರೆ ಎಂದು ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಈ ಪ್ರದೇಶದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದ ಉಪ್ಪಿನಂಗಡಿ (ರಾಷ್ಟ್ರೀಯ ಹೆದ್ದಾರಿ ೪೮ ಕಿ.ಮೀ. ೨೯೮.೦೦ರಿಂದ) ಕಡಬ ಸುಬ್ರಹ್ಮಣ್ಯ ಲೋಕೋಪಯೋಗಿ ಇಲಾಖೆ ರಸ್ತೆಯ ಮಧ್ಯೆ ಹೊಂಡ ಗುಂಡಿಗಳು ಹಾಗೂ ರಸ್ತೆಯ ಎರಡು ಪಕ್ಕದಲ್ಲಿ ಗುಂಡಿಗಳು ಬಿದ್ದಿದ್ದು ಈಗಾಗಲೇ ಗಮನಕ್ಕೆ ಬಂದಿದ್ದು ರಸ್ತೆ ಮಧ್ಯೆದಲ್ಲಿರುವ ಹೊಂಡ ಗುಂಡಿಗಳನ್ನು ಮುಚ್ಚಲು ಈಗಾಗಲೇ ಕ್ರಮ ಕೈಗೊಂಡಿದ್ದು, ಜುಲೈ ೨೦೦೧ ರ ಅಂತ್ಯದ ಒಳಗೆ ದುರಸ್ತಿ ಕಾರ್ಯವನ್ನು ಮುಗಿಸಲಾಗುವುದು.

2. ಉಪ್ಪಿನಂಗಡಿ (ರಾಷ್ಟ್ರೀಯ ಹೆದ್ದಾರಿ ೪೮ ಕಿ.ಮೀ. ೨೯೮.೦೦ರಿಂದ) ಕಡಬ ಸುಬ್ರಹ್ಮಣ್ಯ ರಸ್ತೆಯ ಕಿ.ಮೀ.೦.೦೦ ರಿಂದ ೩೨೫೦ರ ವರೆಗೆ (ಮರ್ದಾಲ) ವರೆಗೆ ಜಿಲ್ಲಾ ಮುಖ್ಯ ರಸ್ತೆ ಹಾಗೂ ಮರ್ದಾಲದಿಂದ ಸುಬ್ರಹ್ಮಣ್ಯ ವರೆಗೆ ಕಿ.ಮೀ. ೦.೦೦ದಿಂದ ೧೭.೬೦ರ ವರೆಗೆ ರಾಜ್ಯ ಹೆದ್ದಾರಿಯಾಗಿದ್ದು ಇದರ ಒಟ್ಟು ಉದ್ದವು ೫೦.೧೦ ಕಿ.ಮೀ. ಆಗಿರುತ್ತದೆ. ಸುಬ್ರಹ್ಮಣ್ಯದಿಂದ (೦.೦೦ಕಿ.ಮೀ.) ೩.೫೦ ಕಿ.ಮೀ. ವರೆಗೆ ೨೦೦೦ ೨೦೦೧ನೇ ಸಾಲಿನಲ್ಲಿ ಮರು ಡಾಂಬರೀಕರಣ ಮಾಡಿದ್ದು, ಉಳಿದ ಭಾಗಕ್ಕೆ ಬಹಳ ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿರುತ್ತದೆ. ಈ ರಸ್ತೆಯ ಸುಬ್ರಹ್ಮಣ್ಯದಿಂದ ಮರ್ದಾಲ ವರೆಗೆ ಆಯ್ದ ಭಾಗಗಳಲ್ಲಿ ರಾಜ್ಯ ಹೆದ್ದಾರಿಯ ವಾರ್ಷಿಕ ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ೯.೧೦ ಕಿ.ಮೀ.ಗೆ ಮರು ಡಾಂಬರೀಕರಣಕ್ಕಾಗಿ ಅವಕಾಶ ಮಾಡಲಾಗಿದೆ.

ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳು.

2183(3237) ಶ್ರೀ ಅಂಗಾರ ಎಸ್. (ಸುಳ್ಯ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದೊಡ್ಡತೋಟ, ಕಕ್ಕುಜಡ್ಕ, ಪಾಜಪಳ್ಳ ರಸ್ತೆಯು ನಬಾರ್ಡ್ ಯೋಜನೆಯಡಿಯಲ್ಲಿ ಸೇರ್ಪಡೆಗೊಂಡಿದ್ದು ಕಾಮಗಾರಿಯನ್ನು ಪ್ರಾರಂಭಿಸದೇ ಇರಲು ಕಾರಣವೇನು?

2. ಈ ರಸ್ತೆಯ ಅಭಿವೃದ್ಧಿಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಹಿಂದಿನ ಅಧಿವೇಶನದಲ್ಲಿ ಪ್ರಶ್ನೆ ಸಂಖ್ಯೆ 1458ಕ್ಕೆ ಉತ್ತರಿಸಿರುವಂತೆ ಈ ಕಾಮಗಾರಿಯ ನಬಾರ್ಡ್ ಆರ್‌ಐಡಿಎಫ್- 4ರಲ್ಲಿ ರೂ. 36.50 ಲಕ್ಷಕ್ಕೆ ಮಂಜೂರಾಗಿದ್ದು 4 ಬಾರಿ ಟೆಂಡರ್ ಕರೆದಿದ್ದು ಟೆಂಡರ್‌ನ ಮೊತ್ತವು ಅತ್ಯಧಿಕವಿದ್ದು ಈ ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಬೇಕಿರುವುದರಿಂದ ಕಾಮಗಾರಿಯನ್ನು ಕೈಬಿಡಲಾಗಿದೆ.

2. ಈ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಹೊಸದಾಗಿ ಸಚಿವ ಸಂಪುಟ ಉಪಸಮಿತಿಯಲ್ಲಿ ಪ್ರಸ್ತಾವಿಸಿ ಮುಂದಿನ ಆರ್‌ಐಡಿಎಫ್ ಯೋಜನೆಯಡಿ ನಬಾರ್ಡ್‌ನಿಂದ ಅನುಮೋದನೆ ಪಡೆದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಸೇತುವೆ ಕಾಮಗಾರಿ.

2184(2706) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಹೊಳೆಗೆ ಸೇತುವೆ ನಿರ್ಮಿಸಲಾಗುತ್ತಿದೆ. ಅವು ಯಾವುವು ಹಾಗೂ ಇವುಗಳಿಗೆ ತಗಲುವ ವೆಚ್ಚವೆಷ್ಟು; (ವಿವರ ನೀಡುವುದು)